**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ 158 ಟಿಎನ್ಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:06-04-2021.

# ಆದೇಶ

1. ರಾಜ್ಯದಲ್ಲಿ ಕೋವಿಡ್-19 ಪ್ರಕರಣಗಳು ಉಲ್ಬಣಗೊಳ್ಳುತ್ತಿರುವುದರಿಂದಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ನಿಗದಿಪಡಿಸಿರುವ ದರದಲ್ಲಿ ರೋಗಿಗಳಿಗೆ ಹಾಸಿಗೆಗಳನ್ನು ಮೀಸಲಿಡುವಂತೆ ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ಆದೇಶಿಸಲಾಗಿರುತ್ತದೆ.

2. ಈ ಹಿನ್ನೆಲೆಯಲ್ಲಿ, ಆದೇಶ ಸಂಖ್ಯೆ: ಕಂಇ 158 ಟಿಎನ್ಆರ್ 2020, ದಿನಾಂಕ:06.04.2021ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವಂತಹ ಖಾಸಗಿ ಆಸ್ಪತ್ರೆಗಳು / ವೈದ್ಯಕೀಯ ಸಂಸ್ಥೆಗಳಲ್ಲಿ ಹಾಸಿಗೆಗಳನ್ನು ಮೀಸಲಿರಿಸುವ ಕಾರ್ಯಕ್ಕೆ ಕಾರ್ಯ ತಂಡವನ್ನು ರಚಿಸಿ ಆದೇಶಿಸಲಾಗಿದೆ.

3. ಮುಂದುವರೆದು, ಖಾಸಗಿ ವೈದ್ಯಕೀಯ ಕಾಲೇಜುಗಳು / ಆಸ್ಪತ್ರೆಗಳಲ್ಲಿ ಕೋವಿಡ್-19 ಚಿಕಿತ್ಸೆಯ ವ್ಯವಸ್ಥೆಗೆ ಹಾಸಿಗೆಗಳನ್ನು ಕಲ್ಪಿಸಲು / ಮೀಸಲಿರಿಸಲು ಶ್ರೀ ಎನ್. ಜಯರಾಮ್ (ಭಾ.ಆ.ಸೇ.) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರ ನೇತೃತ್ವದಲ್ಲಿ ಈ ಕೆಳಕಂಡ ಕಾರ್ಯ ತಂಡವನ್ನು ರಚಿಸಿ ಆದೇಶಿಸಿದೆ.

| ಕ್ರ. ಸಂ. | ಕಾರ್ಯತಂಡದ ನಾಯಕರು | ತಂಡದ ಸದಸ್ಯರು | ಕೇಂದ್ರೀಕರಿಸಬೇಕಾದ ಅಂಶಗಳು |
|---|---|---|---|
| 1 | ಶ್ರೀ ಎನ್. ಜಯರಾಮ್ (ಭಾ.ಆ.ಸೇ.) | 1) ಶ್ರೀ ರಾಜೇಶ್ ಗೌಡ (ಭಾ.ಆ.ಸೇ.) ವ್ಯವಸ್ಥಾಪಕ ನಿರ್ದೇಶಕರು (BESCOM)<br>2) ಜೆ. ಮಂಜುನಾಥ್ ಭಾ.ಆ.ಸೇ., ಜಿಲ್ಲಾಧಿಕಾರಿ, ಬೆಂಗಳೂರು ನಗರ.<br>3) ಕೆ. ಶ್ರೀನಿವಾಸ್ ಭಾ.ಆ.ಸೇ., ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ.<br>4) ಸಂಬಂಧಿಸಿದ ಪ್ರದೇಶದ ಪೊಲೀಸ್ ಉಪ ಆಯುಕ್ತರು.<br>5) ಜಿಲ್ಲಾ ಆರೋಗ್ಯ ಅಧಿಕಾರಿ, ಬೆಂಗಳೂರು ನಗರ.<br>6) ಜಿಲ್ಲಾ ಆರೋಗ್ಯ ಅಧಿಕಾರಿ, ಬೆಂಗಳೂರು ಗ್ರಾಮಾಂತರ. | ಎಲ್ಲಾ ಇತರೆ ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ವ್ಯವಸ್ಥೆ |

i. ಈ ಕಾರ್ಯತಂಡಗಳು ಆಯುಕ್ತರು, ಬಿ.ಬಿ.ಎಂ.ಪಿ ಇವರಿಗೆ ವರದಿ ಮಾಡುವುದು.

ii. ಬೆಂಗಳೂರು ಪ್ರದೇಶದಲ್ಲಿ ನಿಯೋಜಿಸಲಾದ ಕಾರ್ಯದ ಸಮಗ್ರ, ಪರಿಣಾಮಕಾರಿ ಮತ್ತು ಸಮಯೋಚಿತ ಅನುಷ್ಠಾನಕ್ಕೆ ಕಾರ್ಯತಂಡವು ಜವಾಬ್ದಾರವಾಗಿರುತ್ತದೆ.

iii. ಈ ಕಾರ್ಯತಂಡಗಳು, ಇತರೆ ಕಾರ್ಯತಂಡಗಳು ಮತ್ತು ಪಾಲುದಾರರಿಗೆ ಆಯಾ ವಾರ್ ರೂಂ/ ಐಟಿ ಆಪ್ (IT App) ಮತ್ತು ಪರಿಕರಗಳ ಮೂಲಕ ಸಮಯೋಚಿತ ರೀತಿಯಲ್ಲಿ ಕ್ರಿಯಾತ್ಮಕ ಮಾಹಿತಿಯನ್ನು ಒದಗಿಸತಕ್ಕದ್ದು.

4. ಕಾರ್ಯ ತಂಡವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯದ ದಿನಾಂಕ:28.07.2020ರ ಆದೇಶದಲ್ಲಿ ತಿಳಿಸಿರುವುದನ್ನು ಅನುಸರಿಸಲಾಗುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

...2

5. ಈ ಆದೇಶವನ್ನು ವಿಪತ್ತು ನಿರ್ವಹಣಾ ಕಾಯ್ದೆ, 2005ರ ಸೆಕ್ಷನ್ 24(ಇ), (ಎಫ್) ಮತ್ತು (ಎಲ್) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹೊರಡಿಸಲಾಗಿದೆ.

**(ಪಿ. ರವಿಕುಮಾರ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ
ರಾಜ್ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷರು

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.